# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 294 |
| ಉತ್ತರಿಸುವ ದಿನಾಂಕ | 21.12.2022 |
| ಉತ್ತರಿಸುವ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯಲ್ಲಿ ನಗರಾಶ್ರಯ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ; | ಮಂಡ್ಯ ಜಿಲ್ಲೆಯಲ್ಲಿ ನಗರಾಶ್ರಯ ಯೋಜನೆಯಡಿ ಒಟ್ಟು 300 ಮನೆಗಳನ್ನು ನಿರ್ಮಿಸಲಾಗಿದೆ. |
| ಆ) | ಮಂಡ್ಯ ಜಿಲ್ಲೆಯ ಯಾವ ಯಾವ ಪ್ರದೇಶದಲ್ಲಿ ಎಷ್ಟು ಸಂಖ್ಯೆ ಮನೆಗಳನ್ನು ನಿರ್ಮಾಣ ಮಾಡಲಾಗಿದೆ ಹಾಗೂ ಮನೆಗಳನ್ನು ನಿರ್ಮಾಣ ಮಾಡಿದ ಸಂಸ್ಥೆ ಮತ್ತು ಭರಿಸಲಾದ ವೆಚ್ಚ ಎಷ್ಟು; | 2010-11ನೇ ಸಾಲಿನಿಂದ ಇಲ್ಲಿಯವರೆಗೆ ಮಂಡ್ಯ ಜಿಲ್ಲೆಯಲ್ಲಿ ವಿವಿಧ ನಗರ ವಸತಿ ಯೋಜನೆಗಳಡಿ 6127 ಮನೆಗಳನ್ನು ಮಂಜೂರು ಮಾಡಲಾಗಿದ್ದು, 2144 ಮನೆಗಳು ಪೂರ್ಣಗೊಂಡಿರುತ್ತದೆ, 1656 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, 786 ಮನೆಗಳ ನಿರ್ಮಾಣವನ್ನು ಪ್ರಾರಂಭಿಸಬೇಕಿರುತ್ತದೆ ಉಳಿದಂತೆ 1541 ಮನೆಗಳು ಬ್ಲಾಕ್ ಆಗಿರುತ್ತದೆ.<br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಮಂಡ್ಯ ಜಿಲ್ಲೆಯಲ್ಲಿ ಈ ಕೆಳಕಂಡಂತೆ ಮನೆಗಳನ್ನು ನಿರ್ಮಿಸುತ್ತಿದೆ. |

| ನಗರ /ಪಟ್ಟಣ | ಅನುಮೋದನೆ ಗೊಂಡ ಮನೆಗಳು | ಗುತ್ತಿಗೆದಾರರ ಹೆಸರು | ಯೋಜನೆಗೆ ಬಿಡುಗಡೆಯಾದ ಮೊತ್ತ (ರೂ ಲಕ್ಷಗಳಲ್ಲಿ) |
|---|---|---|---|
| ಮದ್ದೂರು | 250 | M/s Chaitra Civil Venture LLP | 540.26 |
| ಮಳವಳ್ಳಿ | 500 | Sri. N Srinivasa Raju | 1047.91 |
| ಮಂಡ್ಯ | 500 | sri. B N krishne Gowda | 1082.55 |
| ನಾಗಮಂಗಲ | 250 | M/s Chaitra Civil Venture LLP | 483.78 |
| ಕೆ.ಆರ್ ಪೇಟೆ | 500 | Sri Vijaykumar T (M/s. Hombale Construction & Pvt Ltd) | 148.21 |

<table>
<tr>
<td>ಇ)</td>
<td>ನಗರಾಶ್ರಯ ಯೋಜನೆಯಡಿ ನಿರ್ಮಿಸಲಾದ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಯಾವ ವರ್ಷದಲ್ಲಿ ಮನೆಗಳನ್ನು ಹಂಚಿಕೆ ಮಾಡಲಾಗಿದೆ; (ವಿವರ ನೀಡುವುದು)</td>
<td>ಮಂಡ್ಯ ಜಿಲ್ಲೆಯಲ್ಲಿ ರಾಜ್ಯ ಪುರಸ್ಕೃತ ವಿವಿಧ ವಸತಿ ಯೋಜನೆಯಡಿ ನಿರ್ಮಿಸಲಾದ ಮನೆಗಳನ್ನು ಫಲಾನುಭವಿಗಳೇ ಸ್ವತಃ ನಿರ್ಮಿಸಿಕೊಳ್ಳುತ್ತಿದ್ದು, ಯೋಜನಾವಾರು ಶ್ರೇಣಿವಾರು ವಿವರಗಳನ್ನುಅನುಬಂಧ-1ರಲ್ಲಿ ಒದಗಿಸಲಾಗಿದೆ.<br><br>ಫಲಾನುಭವಿಗಳು ತಮ್ಮದೇ ನಿವೇಶನದಲ್ಲಿ ತಾವೇ ಸ್ವತಃ ನಿರ್ಮಿಸಿಕೊಳ್ಳುತ್ತಿದ್ದು, ಮನೆಗಳನ್ನು ಹಂಚಿಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.<br><br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಕೊಳಚೆ ಪ್ರದೇಶಗಳಲ್ಲಿ ಅಲ್ಲಲ್ಲಿ ಚದುರಿದಂತೆ ಇರುವ ಕಚ್ಚಾ ಮನೆಗಳನ್ನು ಗುರುತಿಸಿ, ಅವುಗಳನ್ನು ಕೆಡವಿ ಪಕ್ಕಾ ಮನೆಗಳನ್ನು ನಿರ್ಮಿಸುತ್ತಿದೆ. ಫಲಾನುಭವಿಗಳಿಂದ ವಂತಿಕೆ ಸಂಗ್ರಹಿಸಿ, ಅವರುಗಳಿಗೆ ಬ್ಯಾಂಕ್ ಸಾಲ ಒದಗಿಸಿ ಮನೆಗಳನ್ನು ಹಂಚಿಕೆ ಮಾಡುತ್ತಿದೆ.<br><br>ನಗರಾಶ್ರಯ ಯೋಜನೆಯಡಿ ನಿರ್ಮಿಸಲಾದ ಎಲ್ಲಾ 300 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. ವಿವರ ಕೆಳಕಂಡಂತಿದೆ.<br>
<table>
<tr><th>ಕ್ರ.ಸ</th><th>ಕೊಳಚೆ ಪ್ರದೇಶದ ಹೆಸರು</th><th>ನಿರ್ಮಿಸಲಾದ ಮನೆಗಳು</th><th>ಹಂಚಿಕೆಯಾದ ವರ್ಷ</th></tr>
<tr><td>1</td><td>ಕಲ್ಲಹಳ್ಳಿ ಮುಸ್ಲಿಂ ಬ್ಲಾಕ್</td><td>60</td><td>1998-99</td></tr>
<tr><td>2</td><td>ಸ್ಲಾಟರ್ ಹೌಸ್ ಹಿಂಭಾಗ</td><td>40</td><td>1998-99</td></tr>
<tr><td>3</td><td>ಗರೀಬಿ ಹಠಾವೋ</td><td>200</td><td>2002-03</td></tr>
<tr><td></td><td>ಒಟ್ಟು</td><td>300</td><td></td></tr>
</table>
</td>
</tr>
<tr>
<td>ಈ)</td>
<td>ಮಂಡ್ಯ ಜಿಲ್ಲೆ ಮದ್ದೂರು ಪಟ್ಟಣದ ಗರೀಬಿ ಹಠವೋ ಕೊಳಚೆ ಪ್ರದೇಶದಲ್ಲಿ ಫಲಾನುಭವಿಗಳಿಗೆ ಈವರೆವಿಗೂ ಸಾಲಮನ್ನಾ ತಿಳಿವಳಿಕೆ ಪತ್ರ ನೀಡದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸಾಲಮನ್ನಾ ತಿಳಿವಳಿಕೆ ಪತ್ರ ವಿತರಿಸಲಾಗುವುದು? (ಮಾಹಿತಿ ನೀಡುವುದು)</td>
<td>ಸರ್ಕಾರದ ಆದೇಶ ಸಂಖ್ಯೆ: ವಇ 31 ಹೆಚ್.ಎ.ಹೆಚ್ 2013, ದಿನಾಂಕ 03.09.2014 ರಲ್ಲಿ ಆಶ್ರಯ ಹಾಗೂ ಮತ್ತಿತರ ವಸತಿ ಯೋಜನೆಗಳಡಿ ಫಲಾನುಭವಿಗಳ ಬಾಕಿ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗಿರುತ್ತದೆ. ಈ ಆದೇಶದನ್ವಯ ಫಲಾನುಭವಿಗಳ ಸ್ವತ್ತನ್ನು ಅಡಮಾನದಿಂದ ಮುಕ್ತಗೊಳಿಸಿ ಸಂಬಂಧಪಟ್ಟ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ವಇ 2 ಹೆಚ್ಎಹೆಚ್ 2022, ದಿನಾಂಕ: 28.01.2022 ರಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಸ್ವಂತ ನಿವೇಶನದಲ್ಲಿ ಸಹಾಯಧನ ಪಡೆದು ಮನೆ ನಿರ್ಮಿಸಿಕೊಂಡಿರುವ/ನಿರ್ಮಿಸಿಕೊಳ್ಳುವ ಫಲಾನುಭವಿಗಳ ಆಸ್ತಿ/ನಿವೇಶನವನ್ನು ಅಡಮಾನ ನೋಂದಣಿಯಿಂದ ಸಂಪೂರ್ಣವಾಗಿ ರದ್ದುಗೊಳಿಸಿರುವುದರಿಂದ ಫಲಾನುಭವಿಗಳಿಗೆ ಸಾಲ ಮನ್ನಾ ತಿಳುವಳಿಕೆ ಪತ್ರ ವಿತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.</td>
</tr>
</table>

ಸಂಖ್ಯೆ: ವಇ 257 ಹೆಚ್ಎಫ್ಎ 2022]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು